ಅ) ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಚಿಕ್ಕಿ ಹೊಳೆಗೆ ಕಟ್ಟಲಾದ ಆಣೆಕಟ್ಟಿಯಿಂದ ಇದುವರೆಗೂ ನೀರು ಸರಬರಾಜು ಮಾಡದಿರಲು ಕಾರಣಗಳೇನು;

ಆ) ಕಳೆದ 20 ವರ್ಷಗಳಿಂದ ಆಗತ್ಯವಿರುವ 300ಮೀ. ಜಾಗವನ್ನು (ಹುಲ್ಲುಗಾವಲು) ಖಾಸಗಿ ವ್ಯಕ್ತಿಯಿಂದ ಸರ್ಕಾರ ಈ ಯೋಜನೆಗೆ ವಶಪಡಿಸಿಕೊಳ್ಳದಿರಲು ಕಾರಣವೇನು?

ಶ್ರೀ ಎಚ್.ಕೆ. ಪಾಟೀಲ್ (ಜಲಸಂಪನ್ಮೂಲ ಮಂತ್ರಿಗಳು) :—

ಅ) ಚಿಕ್ಕಿಹೊಳೆ ಯೋಜನೆಯ ಅಡಿಯಲ್ಲಿ ಬರತಕ್ಕ ಒಟ್ಟು 865 ಹೆ.ಗಳ ಆಚ್ಚುಕಟ್ಟಿನ ಪೈಕಿ 436 ಹೆ. ಭೂಪ್ರದೇಶಕ್ಕೆ ನೀರು ಸರಬರಾಜು ಮಾಡಲಾಗುತ್ತಿದೆ. ಚಿಕ್ಕಿಹೊಳೆ ಎಡದಂಡೆ ನಾಲೆ 7 ಮತ್ತು 8ನೇ ಕಿ.ಮೀ.ನಲ್ಲಿ 395 ಮೀ. ಉದ್ದದ ಮಣ್ಣು ಆಗೆತ ಕಾಮಗಾರಿ ಭೂಸ್ವಾಧೀನ ವಿವಾದ ಕಾರಣ ಸ್ಥಗಿತಗೊಂಡಿದ್ದು ಇದರ ಆಡಿಯಲ್ಲಿ ಬರತಕ್ಕ 429 ಹೆ. ಆಚ್ಚುಕಟ್ಟಿಗೆ ನೀರೊದಗಿಸಲು ಸಾಧ್ಯವಾಗಿರುವುದಿಲ್ಲ.

ಆ) ಭೂ ಮಾಲೀಕರು ಭೂ ಪರಿಹಾರ ಪಡೆಯದೆ ಭೂಮಿಯನ್ನು ನೀರಾವರಿ ಇಲಾಖೆಗೆ ವಹಿಸಿಕೊಡುವಲ್ಲಿ ಆಡಚಣೆ ಮಾಡುತ್ತಿದ್ದಾರೆ. ಇತ್ತೀಚೆಗೆ ಇದರ ಭೂ ಮಾಲೀಕರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿರುವುದರಿಂದ ನ್ಯಾಯಾಲಯದ ತೀರ್ಪಿನ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಸೋಮವಾರಪೇಟೆ ಪಟ್ಟಣಕ್ಕೆ ಹಾರಂಗಿ ಜಲಾಶಯದಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು.

2303(2836) ಶ್ರೀ ಎಂ.ಪಿ. ಅಪ್ಪಚ್ಚುರಂಜನ್ (ಸೋಮವಾರಪೇಟೆ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಕೊಡಗು ಜಿಲ್ಲೆ ಸೋಮವಾರ ಪೇಟೆ ಪಟ್ಟಣಕ್ಕೆ ಹಾರಾಗಿ ಜಲಾಶಯದಿಂದ ಕುಡಿಯುವ ನೀರಿನ ಪೂರೈಕೆ ವ್ಯವಸ್ಥೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ ವಿವರಣೆ ನೀಡವುದು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :—

1. ಹೌದು, ಪ್ರಸ್ತಾವನೆ ಇದೆ.

ಪಟ್ಟಣಕ್ಕೆ ಹಾರಂಗಿ ಜಲಾಶಯದಿಂದ ನೀರು ಪೂರೈಸಲು ಯೋಜನಾ ಸಾಧ್ಯತಾ ವರದಿಯನ್ನು ಇನ್ನು ಎರಡು ತಿಂಗಳಲ್ಲಿ ತಯಾರಿಸಲಾಗುವುದು. ಇದಕ್ಕೆ ಅನುಮೋದನೆ ದೊರೆತ ನಂತರ ಕಾಮಗಾರಿಗಳನ್ನು ಪ್ರಾರಂಭಿಸಿ ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲಾಗುವುದು.